ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 258

**31 ಆಗಸ್ಟ್ 2023 * ಗುರುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ಗಾಯನ



ವಿದುಷಿ ಸ್ಫೂರ್ತಿ ರಾವ್



ವಿದುಷಿ ಸಿ.ವಿ. ಶ್ರುತಿ
ವಯೊಲಿನ್



ವಿದ್ವಾನ್ ಕೆ.ವಿ. ಪ್ರಸಾದ್
ಮೃದಂಗ



ವಿದ್ವಾನ್ ಶರತ್ ಕೌಶಿಕ್
ಘಟಂ

ಸರ್ವರಿಗೂ ಹಾರ್ದಿಕ ಸುಸ್ವಾಗತ

**ವಿದುಷಿ ಸ್ಫೂರ್ತಿ ರಾವ್‌ರವರು** ಕರ್ನಾಟಕ ಸಂಗೀತಪ್ರಿಯರ ಮನೆಮಾತಾಗಿದ್ದಾರೆ. ಮೂರನೇ ವಯಸ್ಸಿನಲ್ಲಿ ಸಂಗೀತದ ಪ್ರಾರಂಭಿಕ ಪರಿಚಯ ತಾಯಿ ಶ್ರೀಮತಿ ಸಿಂಧುರವರಿಂದ; ಐದನೇ ವಯಸ್ಸಿನಿಂದ ವಿದ್ವಾನ್ ಯಶಸ್ವಿ ಸುಬ್ಬರಾವ್‌ರವರ ಬಳಿ ದೇವರನಾಮಗಳನ್ನು ಕಲಿಯತೊಡಗಿದರು. 10ನೆಯ ವರ್ಷದಿಂದ ಚೆನ್ನೈನಲ್ಲಿ ನೆಲೆಸಿ ಖ್ಯಾತ ವಿದುಷಿಯರಾದ ಶ್ರೀಮತಿ ರಂಜನಿ ಮತ್ತು ಗಾಯತ್ರಿಯವರ ಮಾರ್ಗದರ್ಶನದಲ್ಲಿ ಪ್ರಬುದ್ಧ ಕಲಾವಿದರಾಗಿ ರೂಪುಗೊಳ್ಳುತ್ತಿದ್ದಾರೆ. 9ನೆಯ ವಯಸ್ಸಿನಲ್ಲಿ ಸೂಪರ್ ಸಿಂಗರ್ ಜ್ಯೂನಿಯರ್ ಪ್ರಶಸ್ತಿಗೆ ಭಾಜನರಾದ ಸ್ಫೂರ್ತಿ ರಾವ್ ಖ್ಯಾತ ಚಲನಚಿತ್ರ ಸಂಗೀತ ದಿಗ್ಗಜರಾದ ಶ್ರೀ ಎಸ್.ಪಿ. ಬಾಲಸುಬ್ರಹ್ಮಣ್ಯಂ ಸೇರಿದಂತೆ ಮೊದಲಾದವರೊಡನೆ ವಿಶ್ವಪರ್ಯಟನೆ ಮಾಡಿ ಅಸಂಖ್ಯಾತ ಕಾರ್ಯಕ್ರಮಗಳನ್ನು ನೀಡಿ ಜನಪ್ರಿಯತೆ ಗಳಿಸಿರುವರು. ಯುಟ್ಯೂಬ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಅವರ ಅಭಿಮಾನಿಗಳ ಸಂಖ್ಯೆ ಮೂರು ಕೋಟಿಯನ್ನೂ ಮೀರಿದೆ. ಅಂತಾರಾಷ್ಟ್ರೀಯ ಸಂಗೀತಯಾನ ಮಾಡಿರುವ ಇವರು ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ 140ಕ್ಕೂ ಹೆಚ್ಚು ಕಚೇರಿ ನೀಡಿದ ಹಿರಿಮೆ ಹೊಂದಿದ್ದಾರೆ.

ಚಿಕ್ಕ ವಯಸ್ಸಿಗೇ ಅಭೂತಪೂರ್ವ ಸಾಧನೆ ಮಾಡಿರುವ ಈ ಕಲಾವಿದರಿಗೆ ಹಲವಾರು ಪ್ರಶಸ್ತಿ, ಗೌರವಗಳು ಸಂದಿವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಸಮ್ಮಾನಿತರಾಗಿ 8 ವರ್ಷಕ್ಕೇ ಆಕಾಶವಾಣಿ ಕಲಾವಿದರಾದರು. "ವಿಳಿಗಳ್ ಮೀನೂ" ಎಂಬ ಇವರ ಹಾಡಿಗೆ ಅಪಾರ ಪ್ರಶಂಸೆ ವ್ಯಕ್ತವಾಗಿದ್ದು ಯುಟ್ಯೂಬ್‌ನಲ್ಲಿ 50 ಲಕ್ಷಕ್ಕೂ ಹೆಚ್ಚು ಜನ ಆಲಿಸಿದ್ದಾರೆ. ಲಂಡನ್, ಅಮೆರಿಕ ಮುಂತಾದ ದೇಶಗಳಲ್ಲಿ ಸಂಗೀತ ಪ್ರಸ್ತುತಿ. ಪ್ರಪಂಚದ ಬಾಲಪ್ರತಿಭೆಗಳಲ್ಲಿ ಒಬ್ಬರೆಂಬ ಅಪರೂಪದ ಪುರಸ್ಕಾರವೂ ಸೇರಿ 30ಕ್ಕೂ ಹೆಚ್ಚು ಪ್ರತಿಷ್ಠಿತ ಪ್ರಶಸ್ತಿಗಳನ್ನು ಗಳಿಸಿರುವ ಸಾಧಕರು. 25ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸಿರಿಕಂಠದ ಪ್ರದರ್ಶನ. ಇಷ್ಟೆಲ್ಲ ಸಾಧನೆಗಳ ನಡುವೆ 10ನೇ ತರಗತಿ ಸಿಬಿಎಸ್‌ಇ ಪರೀಕ್ಷೆಯಲ್ಲಿ 99% ಅಂಕ (495/500) ಗಳಿಸಿದ್ದಾರೆ.

**ವಿದುಷಿ ಸಿ.ವಿ. ಶ್ರುತಿಯವರು** ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಸಂಗೀತದ ಪ್ರಾಥಮಿಕ ಶಿಕ್ಷಣವನ್ನು ತಾತ ಶ್ರೀ ಸಿ.ಎಸ್. ನಾಗರಾಜ್ ಅವರಿಂದ ಕಲಿತರು. ಬಳಿಕ 10ನೆಯ ವರ್ಷದಿಂದ ಮೈಸೂರಿನ ಖ್ಯಾತ ವಯೊಲಿನ್ ವಿದ್ವಾಂಸರಾದ ಶ್ರೀ ಎಚ್.ಕೆ. ನರಸಿಂಹಮೂರ್ತಿಯವರ ಬಳಿ ಶಿಷ್ಯವೃತ್ತಿ ಕೈಗೊಂಡರು. ಪ್ರಸ್ತುತ ಅಕ್ಕರೈ ಸಹೋದರಿಯವರಲ್ಲಿ ಉನ್ನತ ಸಂಗೀತ ಶಿಕ್ಷಣ ಮುಂದುವರಿಕೆ. ಗಾನಭಾರತಿಯು ನಡೆಸಿದ ನಾದ ಕಿಶೋರೋತ್ಸವದಲ್ಲಿ (2019) ಅತ್ಯುತ್ತಮ ಪಕ್ಕವಾದ್ಯ ಸಾಥಿ ಪ್ರಶಸ್ತಿ; ನಾದಮಯ ಸಂಸ್ಥೆಯಿಂದ (2022) ವಯೊಲಿನ್ ಸೋಲೋ ಮತ್ತು ಪಕ್ಕವಾದ್ಯ ಎರಡರಲ್ಲೂ ಅತ್ಯುತ್ತಮ ಸಾಧನೆಗಾಗಿ ಪ್ರಶಸ್ತಿ ಗಳಿಸಿದ್ದಾರೆ. ಮೈಸೂರು ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು.

**ವಿದ್ವಾನ್ ಕೆ.ವಿ. ಪ್ರಸಾದ್‌ರವರು** ಆರನೆಯ ವಯಸ್ಸಿನಿಂದಲೇ ಮೃದಂಗವಾದನದ ಅಭ್ಯಾಸ; ವಿದ್ವಾನ್ ಎರ್ನಾಕುಲಂ ನಾರಾಯಣ ಅಯ್ಯರ್‌ರವರ ಬಳಿ ಮೊದಲ ಕಲಿಕೆ; ಅನಂತರ ಪಾಲಕ್ಕಾಡ್ ಮ್ಯೂಸಿಕ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪರಸ್ಸಾಲ ರವಿ ಮತ್ತು ಸಂಗೀತಕಲಾನಿಧಿ ಟಿ.ಕೆ. ಮೂರ್ತಿಯವರ ಮಾರ್ಗದರ್ಶನ. ಇವರು ತಬಲ, ಚೆಂಡೆಗಳಲ್ಲದೆ ವಿದೇಶಿ ವಾದ್ಯಗಳಾದ ಕಾಂಗೋಗಿ, ವೆಸ್ಟರ್ನ್ ಡ್ರಮ್ಸ್ ಇವುಗಳನ್ನು ನುಡಿಸುವಲ್ಲಿಯೂ ನಿಷ್ಣಾತರು. ಅಖಿಲ ಭಾರತ ಆಕಾಶವಾಣಿಯ ಮೃದಂಗವಾದನದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ (1974) ಮತ್ತು ಕೇರಳ ಸಂಗೀತ ನಾಟಕ ಅಕ್ಯಾಡೆಮಿ ಆಯೋಜಿಸಿದ ಅಖಿಲ ಭಾರತ ಮೃದಂಗವಾದನ ಸ್ಫರ್ಧೆಯಲ್ಲಿ ಸತತ ಮೂರು ವರ್ಷ ಪ್ರಥಮ ಸ್ಥಾನ. ಚೆನ್ನೈ ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಅಂತಾರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

**ವಿದ್ವಾನ್ ಶರತ್ ಕೌಶಿಕ್‌ರವರು** ಕರ್ನಾಟಕದ ಉದಯೋನ್ಮುಖ, ಪ್ರತಿಭಾವಂತ ಕಲಾವಿದರಲ್ಲೊಬ್ಬರು. ಇವರು ಮೃದಂಗವಲ್ಲದೆ ಘಟಂ ವಾದನದಲ್ಲೂ ಪ್ರಾವೀಣ್ಯತೆ ಗಳಿಸಿದ್ದಾರೆ. ವಿದ್ವಾನ್ ವಿ.ಎಸ್. ರಮೇಶ್‌ರವರ ಬಳಿ ಪ್ರಾರಂಭಿಕ ಶಿಕ್ಷಣ ಪಡೆದ ಇವರು ಪ್ರಸ್ತುತ ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ವಾದನದ ಸೂಕ್ಷ್ಮತೆಗಳನ್ನು ಕಲಿಯುತ್ತಿರುವರು. ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಜೊತೆಗೆ, ಕಾಗ್ನಿಸೆಂಟ್ (ಸಿಬಿಎಸ್) ಸಾಫ್ಟ್‌ವೇರ್ ಕಂಪನಿಯಲ್ಲಿ ಮ್ಯಾನೇಜರ್ ಆಗಿಯೂ ಕಾರ್ಯ ನಿರ್ವಹಿಸುತ್ತಿರುವರು.

# ಬೆಳದಿಂಗಳ ಸಂಗೀತ 259

## 29 ಸೆಪ್ಟೆಂಬರ್ 2023

**ಗಾಯನ**

ವಿದ್ವಾನ್ ಕಲ್ಯಾಣಪುರಂ ಎಸ್.ಅರವಿಂದ

**ವಯೊಲಿನ್**

ವಿದ್ವಾನ್ ಮತ್ತೂರು ಶ್ರೀನಿಧಿ





**ಮೃದಂಗ**

ವಿದ್ವಾನ್ ಬಿ.ಎಸ್. ಪ್ರಶಾಂತ್

---

ಫೋನ್: 0821–2548221, 2548223 * ಇಮೇಲ್: sutturmath@jssonline.org